ಅನುಭವವಾಗುತ್ತಿದೆ. ನನ್ನ ಮೃತದೇಹವನ್ನು ನಾನೇ ನೋಡುತ್ತಿದ್ದೇನೆ" ಎಂದು ಹೇಳಿದರು. ಇದಾದ ಕೆಲವೇ ದಿನಗಳಲ್ಲಿ ೧೯೨೪ ರ ಡಿಸೆಂಬರ್ ೧೫ ರಂದು, ಸಂಜೆ ೪:೦೮ ಗಂಟೆಗೆ ತಮ್ಮ ದೇಹವನ್ನು ತ್ಯಜಿಸಿದರು. ಗಂಗಾನದಿಯ ದಡದಲ್ಲಿ ಅವರ ದೇಹಕ್ಕೆ ಅಗ್ನಿಸ್ಪರ್ಶ ಮಾಡಲಾಯಿತು.

ಇದಾಗಿ ಸ್ವಲ್ಪ ಸಮಯದ ನಂತರ ವೈದ್ಯರಾದ ಬಿಪಿನ್ ಬಾಬು ಅವರು ಗೋಲಾಪ್‌ಮಾ ಅವರನ್ನು ನೋಡಲು ಬಂದರು. ಅವರು ಸ್ವಾಮಿ ಶಾರದಾನಂದರನ್ನು ಗೋಲಾಪ್‌ಮಾ ಬಗ್ಗೆ ವಿಚಾರಿಸಿದಾಗ ಶಾರದಾನಂದರು, "ಹಕ್ಕಿ ಗುರು ಮಹಾರಾಜರ ಕಡೆ ಹಾರಿಹೋಯಿತು" ಎಂದರು. ಬಿಪಿನ್ ಬಾಬು ಇದಕ್ಕೆ ಪ್ರತಿಕ್ರಿಯಿಸುತ್ತ, ಹೀಗೆ ಹೇಳಿದರು: "ವಾರಾಣಸಿಯಲ್ಲಿ ಗೋಲಾಪ್‌ಮಾ ಶ್ರೀಮಾತೆಯವರೊಂದಿಗೆ ಇದ್ದಾಗ ಮಾತೆಯವರನ್ನು, 'ನನಗೆ ಮುಕ್ತಿ ಬೇಡ, ಸದಾ ನಿಮ್ಮ ಜೊತೆ ಇರುವಂತೆ ಕೃಪೆ ಮಾಡಿ ಅನುಗ್ರಹಿಸಿ' ಎಂದಿದ್ದರು."

ಗೋಲಾಪ್‌ಮಾ, ಅತ್ಯಂತ ಸರಳರೂ ಶ್ರದ್ಧಾವಂತರೂ ಸಹೃದಯರೂ ಆದ ಮಹಿಳೆ. ಶ್ರೀರಾಮಕೃಷ್ಣರು ತಮ್ಮ ಕೃಪಾದೃಷ್ಟಿಯನ್ನು ಗೋಲಾಪ್‌ಮಾ ಕಡೆ ಹರಿಸಿ ಅವರನ್ನು ಅತ್ಯಂತ ಶ್ರೇಷ್ಠವ್ಯಕ್ತಿಯನ್ನಾಗಿ ಪರಿವರ್ತಿಸಿದರು; ಶ್ರೀಮಾತೆಯವರ ಅಂಗರಕ್ಷಕಿಯನ್ನಾಗಿ ಮಾಡಿ ಅವರ ಕೃಪಾಕಟಾಕ್ಷಕ್ಕೂ ಒಳಗಾಗುವಂತೆ ಮಾಡಿದರು. ಹೀಗೆ ಇವರಿಬ್ಬರ ದಿವ್ಯಸಾನ್ನಿಧ್ಯದಿಂದ ಪುನೀತರಾದ ಗೋಲಾಪ್‌ಮಾ ಅವರ ಜೀವನಚರಿತ್ರೆಯನ್ನು ಓದಿ ನಾವೆಲ್ಲರೂ ಧನ್ಯರಾಗೋಣ. ✷

## ಸ್ನೇಹಪ್ರಭ

**'ಕೆಲಸ ಕಡಿಮೆ ಮಾಡಿಕೊಡು ಎಂದು ಭಗವಂತನನ್ನು ಪ್ರಾರ್ಥಿಸಬೇಕು' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಆದರೆ ಕುಟುಂಬ ಬೆಳೆದಹಾಗೆಲ್ಲ ಜವಾಬ್ದಾರಿಗಳು, ಕಳವಳಗಳು ಜಾಸ್ತಿಯಾಗುತ್ತಲೇ ಹೋಗುತ್ತವೆ. ಇದರಿಂದ ಕೆಲಸ ಕಡಿಮೆಯಾಗುವುದಿರಲಿ, ಹೆಚ್ಚಾಗುತ್ತ ಹೋಗುತ್ತದೆ. ಇದಕ್ಕೆ ಪರಿಹಾರವೇನು?**

ಬರಿಯ ಪ್ರಾರ್ಥನೆಯಿಂದ ಏನೂ ಪ್ರಯೋಜನವಿಲ್ಲ. ನಮ್ಮ ಪ್ರಯತ್ನವೂ ಅದರೊಂದಿಗಿದ್ದರೆ ಪ್ರಾರ್ಥನೆ ಫಲಕಾರಿಯಾಗುತ್ತದೆ. ಇಬ್ಬರು ಚಿಕ್ಕ ಹುಡುಗಿಯರು ಶಾಲೆಗೆ ತಡವಾಗಿ ಹೊರಟಿದ್ದರು. ತಡವಾಗಿ ಬಂದುದಕ್ಕೆ ಉಪಾಧ್ಯಾಯರು ಬೈಯಬಹುದು ಅಥವಾ ಹೊಡೆಯಬಹುದು ಎಂಬ ಭಯ ಅವರಿಗೆ. ಒಂದು ಹೆಣ್ಣು ಮಗು ಹೇಳಿತು, "ಭಗವಂತನನ್ನು ಪ್ರಾರ್ಥಿಸೋಣ, ಅವನು ನಮ್ಮನ್ನು ರಕ್ಷಿಸುತ್ತಾನೆ." ಇನ್ನೊಂದು ಮಗು ಹೇಳಿತು, "ಭಗವಂತನನ್ನೂ ಪ್ರಾರ್ಥಿಸೋಣ, ಓಡುತ್ತಲೂ ಹೋಗೋಣ." ಹೀಗೆ ನಮ್ಮ ವರ್ತನೆ ಪ್ರಾರ್ಥನೆಗೆ ಪೂರಕವಾಗಿರಬೇಕು– **ವರ್ತನೆ** ಮತ್ತು **ಪ್ರಾರ್ಥನೆ** ಒಂದಾಗಬೇಕು. ಬಂಧಮುಕ್ತನನ್ನಾಗಿ ಮಾಡು ಎಂದು ಪ್ರಾರ್ಥಿಸುತ್ತ, ಬಂಧನವನ್ನು ಕಳಚಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದಿದ್ದರೆ ಪ್ರಾರ್ಥನೆ ಸಫಲವಾಗುವುದೆಂತು !

"ಪ್ರಾರ್ಥನೆ ಮತ್ತು ವರ್ತನೆಯ ನಡುವೆ ಇರಬೇಕಾದ ಸರಿಯಾದ ಸಂಬಂಧ ಯಾವುದೆಂದರೆ, ವರ್ತನೆಯೇ ಮುಖ್ಯ ಮತ್ತು ಪ್ರಾರ್ಥನೆ ಅದಕ್ಕೆ ಸಹಾಯಕವಾಗುತ್ತದೆ ಎಂಬುದರ ಬದಲು ಪ್ರಾರ್ಥನೆಯೇ ಅತ್ಯಂತ ಮುಖ್ಯ ಮತ್ತು ವರ್ತನೆ ಅದನ್ನು ಸಮರ್ಥಿಸಬೇಕು ಎಂಬುದು" ಎಂದು ವಿಲಿಯಂ ಟೆಂಪಲ್ ಎಂಬ ಸಂತರು ಹೇಳುತ್ತಾರೆ. ನಮ್ಮ ದಿನನಿತ್ಯದ ನಡೆನುಡಿಗಳು ನಾವು ಮಾಡುವ ಪ್ರಾರ್ಥನೆಗೆ ಅನುರೂಪವಾಗಿರಬೇಕು ಎಂದು ಇದರಿಂದ ಗೊತ್ತಾಗುತ್ತದೆ.

ಕುಟುಂಬ ಬೆಳೆದಂತೆ ನಾವೂ ಬೆಳೆಯದಿದ್ದರೆ ಕುಟುಂಬ ದೊಡ್ಡ ಹೊರೆಯಾಗುವುದು ಸ್ವಾಭಾವಿಕ. ಇಲ್ಲಿ ಬೆಳೆಯುವುದೆಂದರೆ ಭಗವಂತನ ಮುಂದೆ ಚಿಕ್ಕವರಾಗುವುದು, ಅವನಲ್ಲಿ ಶರಣಾಗುವುದು, ಮಗುವಿನಂತೆ ಆಗುವುದು. ಮಗು ಬೆಳೆದು ದೊಡ್ಡದಾಗಬೇಕು, ದೊಡ್ಡವರು ಬೆಳೆದು ಮಗುವಾಗಬೇಕು. ನಮ್ಮ ಸ್ವಭಾವ ಬೆಳೆದು ಮಗುವಿನಂತಾದಾಗ ಭಗವಂತನು ನಮ್ಮ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುತ್ತಾನೆ. ಆಗ ಸಂಸಾರದ ಹೊರೆ ಕಡಮೆಯಾಗುತ್ತದೆ, ಕೆಲಸ ಜಾಸ್ತಿಯಿದ್ದರೂ ಜಾಸ್ತಿ ಎನಿಸುವುದಿಲ್ಲ.

ನಾನಿಲ್ಲದಿದ್ದರೂ ಸಂಸಾರ ನಡೆಯುತ್ತದೆ, ಪ್ರಪಂಚ ನಡೆಯುತ್ತದೆ ಎಂಬ ಮನೋಭಾವ ಬೆಳೆಸಿಕೊಂಡರೆ ಆಗ ಹೊರೆ ಕಡಮೆಯಾಗುತ್ತದೆ. ಆಗ ಯಾರಿಗೂ ಮೊರೆಯಿಡಬೇಕಾಗಿಲ್ಲ. ಆಗ ನಮ್ಮ ಮೋರೆಯಲ್ಲಿಯೂ ಬದಲಾವಣೆಯುಂಟಾಗುತ್ತದೆ. "ಮುಗುಳ್ನಗೆಯ ವಕ್ರಗೆರೆ ನಮ್ಮ ಎಷ್ಟೋ ವಕ್ರತೆಗಳನ್ನು ಸರಿಪಡಿಸುತ್ತದೆ."

(ಬರಹ : ಸ್ವಾಮಿ ನಿತ್ಯಸ್ಥಾನಂದ)



# ನವಯುಗದ ನೂತನ ಮಾನವ : ಶ್ರೀರಾಮಕೃಷ್ಣ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)

## ಯುಗಾಂತರದ 'ನೂತನ ಮಾನವ'

ಲಕ್ಷಗಟ್ಟಲೆ ಜನರು ಶ್ರೀರಾಮಕೃಷ್ಣರನ್ನು ಆಧುನಿಕ ಯುಗದ ಅವತಾರಪುರುಷರು ಎಂದು ಪರಿಗಣಿಸುತ್ತಾರೆ. ಪ್ರಸಿದ್ಧವಾಗಿರುವ ಆರಾಧನಾರೂಪದ ಈ ಭಾವನೆಯು ಯಾವುದೇ ಅಬ್ಬರದ ಪ್ರಚಾರದ ಮೂಲಕ ಉಂಟಾದುದಲ್ಲ. ಶ್ರೀರಾಮಕೃಷ್ಣರನ್ನು ಸಾವಿರಾರು ಮನೆಗಳಲ್ಲಿ ಜನರು ಪೂಜಿಸುತ್ತಾರೆ. ಅವುಗಳಲ್ಲಿ ಕೆಲವು ಕಡೆಗಳಂತೂ ಇದು ಅಸಾಧ್ಯವೆಂದೇ ತೋರುವಂತಹ ಸ್ಥಳಗಳು. ಅವರ ಬಗ್ಗೆ ಅಲ್ಪಸ್ವಲ್ಪ ತಿಳಿದಿರುವವರೂ ಅವರನ್ನು ಆರಾಧಿಸುತ್ತಾರೆ. ಶ್ರೀರಾಮಕೃಷ್ಣರದು ಸಾಧಾರಣವಾದ ಬಾಹ್ಯ ರೂಪ. ಆದರೆ ದಿವ್ಯತೆಯನ್ನು ಹೊರಸೂಸುವ ಯಾವುದೋ ಒಂದು ವಿಶಿಷ್ಟ ಅಂಶ ಅವರ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದೆ. ಸುಮಾರು ನೂರು ವರ್ಷಗಳ ಹಿಂದಿನ ಪ್ರಸಂಗ. ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳೊಬ್ಬರು ಕೇರಳದ ಮಹಾನ್ ಸಂತ ಮತ್ತು ಸಮಾಜಸುಧಾರಕರಾದ ಶ್ರೀನಾರಾಯಣ ಗುರುಗಳಿಗೆ ಶ್ರೀರಾಮಕೃಷ್ಣರ ಚಿತ್ರವೊಂದನ್ನು ತೋರಿಸಿದರು. ಇದಲ್ಲದೆ, "ಈ ವ್ಯಕ್ತಿಯ ಬಗ್ಗೆ ನಿಮಗೆ ಏನನ್ನಿಸುತ್ತದೆ?" ಎಂದು ಕೇಳಿದರು. ಕೆಲವಾರು ನಿಮಿಷಗಳ ಕಾಲ ಶ್ರೀರಾಮಕೃಷ್ಣರ ಚಿತ್ರವನ್ನು ದಿಟ್ಟಿಸಿ ನೋಡಿದ ಶ್ರೀನಾರಾಯಣ ಗುರುಗಳು ಹೀಗೆ ಉತ್ತರಿಸಿದರು: "ಪರಬ್ರಹ್ಮಕ್ಕೆ ರೂಪವನ್ನು ಕೊಡುವುದಾದರೆ, ಅದು ಹೀಗೆಯೇ ಇರುತ್ತದೆ." ಅನಂತರ, "ಇದು ಯಾರ ಚಿತ್ರ?" ಎಂದು ಅವರು ವಿಚಾರಿಸಿದರು. ಇದು ಸ್ವಾಮಿ ವಿವೇಕಾನಂದರ ಗುರುಗಳ ಚಿತ್ರವೆಂದು ಅವರಿಗೆ ತಿಳಿದುಬಂದಾಗ ಬಹಳ ಸಂತೋಷಪಟ್ಟರು.

ಆಧುನಿಕ ಅವತಾರಪುರುಷರೆಂದು ಕರೆಸಿಕೊಳ್ಳುವುದಕ್ಕೆ ಬೇಕಾದ ಅತ್ಯಂತ ಸೂಕ್ತ ಸ್ಥಳ, ಕಾಲ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರು ಜನ್ಮತಳೆದರು. ಅವತಾರವೊಂದು ಜನ್ಮವೆತ್ತಲು ಭಾರತ, ಅದರಲ್ಲೂ ಬಂಗಾಳದಷ್ಟು ಉತ್ತಮವಾದ ಪ್ರದೇಶವು, ಇಡೀ ಭೂಮಂಡಲದ ಯಾವುದೇ ಭಾಗದಲ್ಲಿ ಇದ್ದಿತೇ ಎನ್ನುವುದು ಸಂದೇಹವೇ. ಸ್ವಾಮಿ ವಿವೇಕಾನಂದರ ಮಾತುಗಳಲ್ಲಿ ಹೇಳುವುದಾದರೆ, ಯಾವುದಾದರೂ ದೇಶದಲ್ಲಿ ಮಾನವಕೋಟಿಯು ಮಾಧುರ್ಯ, ಔದಾರ್ಯ, ಪಾವಿತ್ರ್ಯ, ಶಾಂತಿ – ಇವುಗಳಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಧ್ಯಾನದಲ್ಲಿ ಮತ್ತು ಅಂತರ್ಮುಖ ಜೀವನದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದರೆ, ಅದು ಭರತಖಂಡವೇ ಆಗಿದೆ (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೩:೩).

ಮಹಾನತೆ (Saintliness) ಮತ್ತು ಆಧ್ಯಾತ್ಮಿಕತೆಗಳು ಚಿಗುರೊಡೆಯಲು, ಹೂವಿನಂತೆ ಅರಳಲು ಮತ್ತು ಪಕ್ವವಾಗಲು ಬೇಕಾದ ಅತ್ಯಂತ ಫಲವತ್ತಾದ ಭೂಮಿಕೆಯನ್ನು ಭಾರತೀಯ ಸಭ್ಯತೆಯು ಒದಗಿಸಿಕೊಡುತ್ತದೆ. ಸಂತರು, ಋಷಿಗಳು ಮತ್ತಿತರ ಆಧ್ಯಾತ್ಮಿಕ ಗುರುಗಳು ದೇವರೆಂದೇ ಗೌರವಿಸಲ್ಪಡುವ ಪುಣ್ಯಭೂಮಿ ಇದು. ಹಿಂದೂಧರ್ಮವೆಂದರೆ, ಹಲವಾರು ಮತಪಂಥಗಳ, ನಂಬಿಕೆಗಳ, ದರ್ಶನಗಳ, ಆಚರಣೆಗಳ ಮತ್ತು ಸಂಪ್ರದಾಯಗಳ ಒಕ್ಕೂಟವಾಗಿದೆ. ಹಾಗೆಯೇ ಅದು ಸಾವಿರಾರು ಋಷಿಗಳು, ಯೋಗಿಗಳು, ಮುನಿಗಳು, ಜ್ಞಾನಿಗಳು, ಭಕ್ತರು, ಸಂನ್ಯಾಸಿಗಳು, ಶ್ರೀಸಾಮಾನ್ಯರು ಮತ್ತು ಮಹಾತ್ಮರು ಹಲವು ಸಹಸ್ರಮಾನಗಳ ಕಾಲಮಾನದಲ್ಲಿ ಸಂಚಯಿಸಿದ ಆಧ್ಯಾತ್ಮಿಕ ಶಕ್ತಿಯ ಬೃಹತ್ ಭಂಡಾರವೂ ಆಗಿದೆ. ಯಾವುದೇ ನೂತನ ಅವತಾರವು ಪ್ರೇರಣೆಯನ್ನು ಪಡೆಯಲು ಈ ಅಗಾಧ ಆಧ್ಯಾತ್ಮಿಕ ಶಕ್ತಿಯು ಸದಾ ಲಭ್ಯವಿದೆ.

ನೂತನ ಅವತಾರವೊಂದು ಮೂಡಿಬರುವುದಕ್ಕೆ, ನಿರ್ದಿಷ್ಟವಾಗಿ ಬಂಗಾಳದ ಸಮಾಜ, ಸಂಸ್ಕೃತಿ ಮತ್ತು ಸಭ್ಯತೆಗಳು ಬಹುಮಟ್ಟಿಗೆ ಅನುಕೂಲಕರವಾಗಿದ್ದವು. ಈ ಯುಗದ ಅವತಾರವು ಭವಿಷ್ಯದಲ್ಲಿ ಕೈಗೊಳ್ಳುವ ಮಹಾನ್ ಕಾರ್ಯಕ್ಕೆ ಈ ಮುಂದಿನ ಅಂಶಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಾಣ ಮಾಡಿದ್ದವು: ೧. ಜಾತೀಯ ಆವರಣಗಳನ್ನು ಮೀರಿ ನಿಂತ ಬಂಗಾಳಿ ಸಮಾಜದ ಸಾಂಸ್ಕೃತಿಕ ಏಕರೂಪತೆ (homogeneity); ೨. ಶ್ರೀಚೈತನ್ಯ ಮತ್ತು ಆತನ ಅನುಯಾಯಿಗಳು ಕೈಗೊಂಡ ಸಾಮಾಜಿಕ ಮನೋಭಾವದ ಉದಾರೀಕರಣ ಮತ್ತು ಜನಸಾಮಾನ್ಯರ ಉನ್ನತಿಯ ಕಾರ್ಯಗಳು; ೩. ಕುಲಗುರು ಅಥವಾ ವಂಶಪಾರಂಪರ್ಯವಾಗಿ ಬಂದ ಆಧ್ಯಾತ್ಮಿಕ ಶಿಕ್ಷಣ; ೪. ಸಂಕೀರ್ತನೆ ಅಥವಾ ಗುಂಪು ಗಾನ–ನರ್ತನಗಳ ವ್ಯಾಪಕ ಪ್ರಭಾವ;

೩. ತಾಂತ್ರಿಕ ಅನುಯಾಯಿಗಳು ಪ್ರಸಿದ್ಧಿಗೊಳಿಸಿದ ಧ್ಯಾನ ಮತ್ತು ಯೋಗವಿಧಾನಗಳು; ೬. ಜಗನ್ಮಾತೆಯೆಂಬಂತೆ ಭಗವತ್ತತ್ತ್ವದ ಆರಾಧನೆ ಮತ್ತು ೭. ಮಾತೃಪ್ರಧಾನವಾದ ಕೌಟುಂಬಿಕ ಜೀವನ. ಇದಲ್ಲದೆ ಕೊಲ್ಕತಾ ಆಗಿನ ಬ್ರಿಟಿಷ್ ಇಂಡಿಯಾದ ರಾಜಧಾನಿಯಾಗಿತ್ತು. ಹೀಗಾಗಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಭಾರತೀಯ ಮಾನಸದಲ್ಲಿ ಉಂಟಾದ ನವೀನ ಜಾಗೃತಿಯು ಆರಂಭಗೊಂಡದ್ದು ಬಂಗಾಳದಲ್ಲಿಯೇ. ಇದು ಶ್ರೀರಾಮಕೃಷ್ಣರು ಬೋಧಿಸಿದ **ಧಾರ್ಮಿಕ ಸಾಮರಸ್ಯ, ವಿಶ್ವವ್ಯಾಪಕತೆ, ಮಾನವತೆಯ ದಿವ್ಯತೆ** ಮುಂತಾದ ನೂತನ ಭಾವನೆಗಳನ್ನು ಮುಕ್ತವಾಗಿ ಸ್ವೀಕರಿಸುವುದಕ್ಕೆ ಜನರ ಮನಸ್ಸನ್ನು ಚೆನ್ನಾಗಿ ಹದಗೊಳಿಸಿತ್ತು.

ಶ್ರೀರಾಮಕೃಷ್ಣರು ನೈಸರ್ಗಿಕವಾಗಿಯೇ ಅಸಾಧಾರಣ ಗುಣಗಳನ್ನು ಮತ್ತು ಸಾಮರ್ಥ್ಯಗಳನ್ನು ಹೊಂದಿದ್ದರು. ಆದರೆ ಅವರು ಹುಟ್ಟಿಬಂದದ್ದು ಸಾಧಾರಣ ಜನಸಮೂಹದಿಂದಲೇ. ಬಾಲ್ಯದಿಂದಲೂ ತಮ್ಮಲ್ಲಿ ಅಂತರ್ಗತವಾಗಿದ್ದ ದಿವ್ಯತೆಯ ಗುಣಗಳು ಮತ್ತು ತಮ್ಮ ವ್ಯಕ್ತಿತ್ವದ ವೈಶಿಷ್ಟ್ಯದ ಉಜ್ವಲ ಪ್ರಜ್ಞೆ ಅವರಲ್ಲಿ ಸದಾ ಜಾಗೃತವಾಗಿತ್ತು. ಹಾಗೆಯೇ ಜೀವನದಲ್ಲಿ ಒಂದು ಮಹಾನ್ ಉದ್ದೇಶವನ್ನು ಸಾಧಿಸಲು ತಾವು ಜನ್ಮವೆತ್ತಿರುವ ಅರಿವೂ ಅವರಲ್ಲಿ ಮನೆಮಾಡಿತ್ತು. ಈ ಜ್ವಲಂತಪ್ರಜ್ಞೆಯೇ ಅವರನ್ನು ಸ್ವತಂತ್ರವಾಗಿ ಚಿಂತನೆ ಮಾಡುವಂತೆ ಪ್ರಚೋದಿಸಿತು; ಇತರ ಸಾಧಾರಣ ಜನರನ್ನು ಅನುಸರಿಸದಂತೆ ಪ್ರೇರೇಪಿಸಿತು. ಅದೇ ಸಮಯದಲ್ಲಿ, ತಮ್ಮ ಜೀವನದುದ್ದಕ್ಕೂ ಯಾರಿಗೂ ಬಗ್ಗದ ಸತ್ಯನಿಷ್ಠೆಯನ್ನು ಅವರು ಕಾಪಾಡಿಕೊಂಡು ಬಂದಿದ್ದರು. ಲೌಕಿಕ ವಿದ್ಯೆಯ ಸೀಮಿತತೆಯನ್ನು ಅರಿತಿದ್ದರಿಂದಲೇ ಎರಡು ಅಥವಾ ಮೂರು ವರ್ಷಗಳ ಅಧಿಕೃತ ಶಾಲಾಶಿಕ್ಷಣಕ್ಕೂ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಲು ಅವರು ನಿರಾಕರಿಸಿದರು. ಅವರದು ತೀಕ್ಷ್ಣವಾದ ಬುದ್ಧಿಶಕ್ತಿ; ಮಹತ್ತರವಾದ ಇಚ್ಛಾಶಕ್ತಿ; ಸಮಾನವಾದ ದೃಷ್ಟಿ; ಶಾಂತವಾದ ಮನಃಸ್ಥಿತಿ; ಎಲ್ಲರಲ್ಲಿಯೂ ಯಾವ ನಿಬಂಧನೆಯೂ ಇಲ್ಲದೆ ಹರಿಯುವ ಪ್ರೇಮ; ದುಃಖಿತ ಜನರಲ್ಲಿ ಗಾಢವಾದ ಅನುಕಂಪ; ವಿಭಿನ್ನ ಅಭಿಪ್ರಾಯಗಳಿಗೆ ತೆರೆದಿಟ್ಟ ಮನಸ್ಸು ಮತ್ತು ಒಟ್ಟಾರೆ ಬಾಳಿನೆಡೆಗೆ ಸಾಮರಸ್ಯ ಮತ್ತು ಸ್ವೀಕಾರದೃಷ್ಟಿಯುಳ್ಳ ಮನೋಭಾವ.

ಪ್ರವಾದಿಗಳು ಹಾಗೂ ಅವತಾರಪುರುಷರಂಥ ಉಚ್ಚಶ್ರೇಣಿಯ ಗುಂಪಿನಲ್ಲಿ ಕೂಡ ಶ್ರೀರಾಮಕೃಷ್ಣರನ್ನು ಅಗ್ರಗಣ್ಯರನ್ನಾಗಿ ಮಾಡುವ ಅವರ ಇನ್ನಿತರ ವೈಶಿಷ್ಟ್ಯಗಳು ಕೆಲವು ಇವೆ. ಹಿಂದೂಧರ್ಮದ ಹಲವು ಮತಗಳು ಮತ್ತು ವಿವಿಧ ಜಾಗತಿಕ ಧರ್ಮಗಳ ಸಾಧನೆಯಲ್ಲಿ ಅವರು ಪ್ರದರ್ಶಿಸಿದ ಅತಿಮಾನುಷ ಆಧ್ಯಾತ್ಮಿಕ ಶಕ್ತಿ ಅವುಗಳಲ್ಲಿ ಒಂದು. ಸಾಧಾರಣವಾಗಿ ಮಹಾನ್ ಪ್ರವಾದಿಗಳೂ ಸೇರಿದಂತೆ ಎಲ್ಲ ಆಧ್ಯಾತ್ಮಿಕ ವ್ಯಕ್ತಿಗಳು, ತಾವು ಕಂಡುಹಿಡಿದ ಅಥವಾ ನಡೆದುಬಂದ ವಿಶಿಷ್ಟ ಆಧ್ಯಾತ್ಮಿಕ ಮಾರ್ಗಗಳಿಗೆ ಮಾತ್ರ ಸೀಮಿತರಾಗಿರುತ್ತಾರೆ. ಆದರೆ ಶ್ರೀರಾಮಕೃಷ್ಣರು ಅನಾಯಾಸವಾಗಿ ವಿವಿಧ ಆಧ್ಯಾತ್ಮಿಕ ಪಥಗಳನ್ನು ಅನುಸರಿಸಿದ್ದು ಮಾತ್ರವಲ್ಲ, ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಇಂದ್ರಿಯಾತೀತ ಅನುಭವದ ಶಿಖರಗಳನ್ನು, ನಂಬಲಸಾಧ್ಯವಾದ ವೇಗದಲ್ಲಿ, ಒಂದಾದ ಮೇಲೊಂದರಂತೆ ಏರಿದರು. ಸಾಧುಸಂತರ ಜೀವನಚರಿತ್ರೆಗಳಲ್ಲಿ ಇದಕ್ಕೆ ಸಮಾನವಾದ ಇನ್ನೊಂದು ಉದಾಹರಣೆ ಕಾಣಬರುವುದಿಲ್ಲ. ಈ ಅಸಾಧಾರಣ ಆಧ್ಯಾತ್ಮಿಕ ಸಿದ್ಧಿಯ ಬಗ್ಗೆ ಶ್ರೀಅರವಿಂದರು ಹೀಗೆ ಬರೆಯುತ್ತಾರೆ:

"ಶ್ರೀರಾಮಕೃಷ್ಣ ಪರಮಹಂಸರ ಜೀವನದಲ್ಲಿ ನಾವು ಬೃಹತ್ತಾದ ಆಧ್ಯಾತ್ಮಿಕ ಸಾಮರ್ಥ್ಯವನ್ನು ನೋಡುತ್ತೇವೆ. ಮೊದಲು ಅವರು ಸ್ವರ್ಗರಾಜ್ಯವನ್ನೇ ಬಲವಂತವಾಗಿ ಮುತ್ತುವಂತೆ ನೇರವಾಗಿ ದಿವ್ಯದರ್ಶನದ ಅಂತರಾಳಕ್ಕೇ ಧುಮುಕಿದರು. ಅನಂತರ ಒಂದಾದ ಮೇಲೆ ಇನ್ನೊಂದರಂತೆ ಹಲವು ಯೋಗವಿಧಾನಗಳನ್ನು ಅನುಸರಿಸಿ, ಅವುಗಳ ಸಾರಸತ್ವವನ್ನು ಅಸಾಧಾರಣ ವೇಗದಿಂದ ಹೀರಿಕೊಂಡರು. ಈ ಪ್ರಕ್ರಿಯೆಯಲ್ಲಿ ಯಾವತ್ತೂ ಈ ಇಡೀ ಸಂಗತಿಯ ಹೃದಯಭಾಗಕ್ಕೆ ಅವರು ಮತ್ತೆ ಮತ್ತೆ ಹಿಂತಿರುಗುತ್ತಿದ್ದರು. ಅದು ಕೇವಲ ಪ್ರೇಮದ ಬಲದಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಮತ್ತು ಪಡೆದುಕೊಳ್ಳುವುದೇ ಆಗಿತ್ತು. ಅವರು ತಮ್ಮ ಸಹಜ ಆಧ್ಯಾತ್ಮಿಕತೆಯನ್ನು ವೈವಿಧ್ಯಮಯ ಅನುಭವಗಳ ಆಯಾಮಗಳಾಗಿ ವಿಸ್ತರಿಸಿಕೊಳ್ಳುವುದರ ಮೂಲಕ ಇದನ್ನು ಸಾಧಿಸಿಕೊಂಡರು. ಹಾಗೆಯೇ ತಮ್ಮಲ್ಲಿದ್ದ ಅನುಭೂತಿಯುಕ್ತ ಜ್ಞಾನದ ಅಪ್ರಯತ್ನಪೂರ್ವಕ ಲೀಲೆಯ ಮೂಲಕ ಗಳಿಸಿಕೊಂಡರು. ಇಂತಹ ಒಂದು ಉದಾಹರಣೆಯನ್ನು ಸಾಧಾರಣೀಕರಿಸಲಾಗದು."

ಶ್ರೀರಾಮಕೃಷ್ಣರ ವ್ಯಕ್ತಿತ್ವದ ಇನ್ನೊಂದು ಅಸಾಧಾರಣ ಅಂಶವೆಂದರೆ ಅವರು ತಮ್ಮ ಜೀವನದಲ್ಲಿ ಪ್ರಕಟಿಸಿದ ಭಗವದ್ಭಕ್ತಿಯ ಅದ್ಭುತ, ಅಭೂತಪೂರ್ವ ಹಾಗೂ ಅಸಮಾನ ಉತ್ಕಟತೆ. ಚೈತನ್ಯ ಮಹಾಪ್ರಭುವಿನ ನಂತರ ಜಗತ್ತು, ಭಗವದನುಭವಕ್ಕಾಗಿ ಈ ಬಗೆಯ ಕಲ್ಪನಾತೀತ ತೀವ್ರತೆಯುಳ್ಳ ವ್ಯಾಕುಲತೆಯನ್ನು ಈ ಹಿಂದೆ ಕಂಡಿರಲಿಲ್ಲ. ಈ ಆಧ್ಯಾತ್ಮಿಕ ತುಮುಲವೇ ಭಗವದ್ದರ್ಶನಕ್ಕಾಗಿ ಇರುವ ವಿವಿಧ ಪಥಗಳನ್ನು ಅನುಸರಿಸಲು ಅವರಿಗೆ ಪ್ರೇರಣೆಯನ್ನು ನೀಡಿತು.

ಶ್ರೀರಾಮಕೃಷ್ಣರ ಜೀವನದ ಉತ್ತರಭಾಗದಲ್ಲಿ ಕಂಡುಬರುವ ಇನ್ನೊಂದು ವಿಶಿಷ್ಟ ಅಂಶವೆಂದರೆ 'ಭಾವಸಮಾಧಿ' ಎಂದು ಕರೆಯವ ಇಂದ್ರಿಯಾತೀತ ಭಗವದ್‌ತಾದಾತ್ಮ್ಯತೆ. ಅವರು ಈ ಭಾವಸಮಾಧಿಗೆ ಮತ್ತೆ ಮತ್ತೆ ಸುಲಭವಾಗಿ ಮತ್ತು ಸುಗಮವಾಗಿ ಏರುತ್ತಿದ್ದರು. ಹಾಗೆಯೇ ಜನಜಂಗುಳಿಯ ಮಧ್ಯದಲ್ಲಿಯೂ, ಬಾಹ್ಯ ಜಗತ್ತಿನ ಪ್ರಜ್ಞೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಿದ್ದರು.

ಎಲ್ಲ ಪ್ರವಾದಿಗಳ ಹಾಗೂ ಅವತಾರಪುರುಷರ ಒಂದು ವಿಶಿಷ್ಟ ಲಕ್ಷಣವೆಂದರೆ, ಶಿಷ್ಯರ ಪಂಗಡವೊಂದನ್ನು ಆಕರ್ಷಿಸಬಲ್ಲ ಅವರ ಮಹಾನ್ ಮೋಹಕಶಕ್ತಿ. ಅವರು ಸಾಧಾರಣವಾಗಿ, ಉನ್ನತ ಆಧ್ಯಾತ್ಮಿಕ ಸಾಮರ್ಥ್ಯವುಳ್ಳವರಾಗಿರುತ್ತಾರೆ ಮತ್ತು ತಮ್ಮ ಶಿಷ್ಯರಲ್ಲಿ ಜೀವನಪೂರ್ತಿ ಇರುವ ನಿಷ್ಠೆಯನ್ನೂ ವಿಧೇಯತೆಯನ್ನೂ ಉದ್ದೀಪಿಸುತ್ತಾರೆ. ತಮ್ಮ ಪ್ರವಾದಿಯ ದೇಹತ್ಯಾಗದ ನಂತರ ಆ ಶಿಷ್ಯರು ಆತನ ಸಂದೇಶವಾಹಕರಾಗುತ್ತಾರೆ, ಧರ್ಮಪ್ರವರ್ತಕರಾಗುತ್ತಾರೆ; ಹತ್ತಿರದ ಮತ್ತು ದೂರದೂರದ ಪ್ರದೇಶಗಳಲ್ಲಿ ನೆಲೆಸಿರುವ ಜನರಿಗೆ ಅವರ ಸಂದೇಶವನ್ನು ವಿವರಿಸುತ್ತಾ, ಹರಡುತ್ತಾ ಸಾಗುತ್ತಾರೆ. ಶ್ರೀರಾಮಕೃಷ್ಣರಿಗೆ ಅಂತಹ ಹದಿನಾರು ಶಿಷ್ಯರಿದ್ದರು. ಅವರಿಗೆಲ್ಲ ಅವರ ಯೌವನದ ಆರಂಭದಿಂದಲೇ ಶ್ರೀರಾಮಕೃಷ್ಣರು ತರಬೇತಿ ಕೊಟ್ಟರು. ಅವರುಗಳು ಮುಂದೆ ಶ್ರೀರಾಮಕೃಷ್ಣರ ಹೆಸರಿನಲ್ಲಿ ಸಂನ್ಯಾಸಿಪಂಥವೊಂದನ್ನು ರಚಿಸಿಕೊಂಡರು. ಅವರಲ್ಲಿ ಮುಖ್ಯನಾದವನು ನರೇಂದ್ರ. ಆತನೇ ಮುಂದೆ ಸ್ವಾಮಿ ವಿವೇಕಾನಂದರಾಗಿ, ತನ್ನ ಗುರುದೇವರ ಸಂದೇಶವನ್ನು ಭಾರತ ಮತ್ತು ಜಗತ್ತಿನಾದ್ಯಂತ ಪ್ರಸಾರ ಮಾಡಿದರು. ಹಾಗೆಯೇ ಹಲವಾರು ಪ್ರಬುದ್ಧ ಗೃಹಸ್ಥರೂ ಶ್ರೀರಾಮಕೃಷ್ಣರ ಶಿಷ್ಯರಾಗಿದ್ದರು.

ಸ್ವಾಮಿ ವಿವೇಕಾನಂದರ ಶಿಷ್ಯತ್ವವೆಂಬುದು ಶ್ರೀರಾಮಕೃಷ್ಣರ ಪಾಲಿಗೆ ದೊಡ್ಡ ಆಸ್ತಿಯಾಗಿಯೇ ಪರಿಣಮಿಸಿತು. ಮಾನವ ಇತಿಹಾಸದಲ್ಲಿ ಮತ್ತಾವ ಪ್ರವಾದಿಯ ಶಿಷ್ಯನೂ ಸ್ವಾಮಿ ವಿವೇಕಾನಂದರಷ್ಟು ತೇಜಸ್ಸು, ವಿದ್ವತ್ತು, ಮಾನವಪ್ರೀತಿ, ಅತಿಶಯ ಭಕ್ತಿ, ಬಹುಮುಖ ಪ್ರತಿಭೆ ಮತ್ತು ದಾರ್ಶನಿಕತೆಯಿಂದ ಕೂಡಿದ್ದು ಕಂಡುಬರುವುದಿಲ್ಲ. ಹದಿನೆಂಟರ ಎಳೆಯ ವಯಸ್ಸಿನಲ್ಲಿಯೇ ನರೇಂದ್ರನು ಪರಮಹಂಸರನ್ನು ತನ್ನ ಗುರುವೆಂದು ಸ್ವೀಕರಿಸಿದ್ದನು. ಇಷ್ಟಾದರೂ ಶ್ರೀರಾಮಕೃಷ್ಣರು ಅವತಾರಪುರುಷರೆಂದು, ಅವರು ಈ ಭೂಮಿಯಲ್ಲಿ ಕಳೆದ ಕಡೆಯ ದಿನಗಳ ತನಕ ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲವೆಂಬುದನ್ನು ನಾವು ಗಮನದಲ್ಲಿಡಬೇಕು. ಕಾಶೀಪುರದ ಉದ್ಯಾನಗೃಹದಲ್ಲಿ ಇದ್ದಾಗ, ತಮ್ಮ ಅಂತ್ಯಕಾಲದ ವ್ಯಾಧಿಗ್ರಸ್ತ ಸ್ಥಿತಿಯಲ್ಲಿ, ಶ್ರೀರಾಮಕೃಷ್ಣರು ನರೇಂದ್ರನಿಗೆ ಹೇಳಿದರು, "ಕೆಲವರು ನನ್ನನ್ನು 'ದೇವರು' ಎನ್ನುತ್ತಾರೆ." ಆಗ ನರೇಂದ್ರ ಅವರಿಗೆ ಹೇಳುತ್ತಾನೆ: "ಸಾವಿರ ಜನರು ಬೇಕಾದರೆ ನಿಮ್ಮನ್ನು 'ದೇವರು' ಎಂದು ಕರೆದುಕೊಳ್ಳಲಿ. ನಾನಂತೂ ಅದು ಸತ್ಯವೆಂದು ನನಗೆ ಗೊತ್ತಾಗುವವರೆಗೆ ನಿಮ್ಮನ್ನು ದೇವರೆಂದು ಖಂಡಿತ ಕರೆಯಲಾರೆ." ಮುಂದೆ ನರೇಂದ್ರ, ಶ್ರೀರಾಮಕೃಷ್ಣರು ಅವತಾರ ಪುರುಷರೆಂದು ಸಾಬೀತುಪಡಿಸುವ ಖಚಿತವಾದ ಸಾಕ್ಷ್ಯವನ್ನು ತಾನೇ ನೇರವಾಗಿ ಯಾವುದೋ ಒಂದು ಅತೀಂದ್ರಿಯ ಅನುಭವದ ಮೂಲಕ ಪಡೆದುಕೊಂಡಿರಬೇಕು. ಆದರೆ ಅದನ್ನು ಅವನು ಯಾರ ಹತ್ತಿರವೂ ಹೇಳಿಕೊಳ್ಳಲಿಲ್ಲವೆಂಬುದು ಸ್ಪಷ್ಟ. ಏಕೆಂದರೆ, ಯಾರು ಅವತಾರವೆಂಬ ತಥ್ಯವನ್ನು ಸ್ವಾಮಿ ವಿವೇಕಾನಂದರು ಸಂದೇಹಿಸಿದ್ದರೋ, ಅಂತಹ ಶ್ರೀರಾಮಕೃಷ್ಣರನ್ನೇ ಮುಂದೆ ತಮ್ಮ ಆರಾತ್ರಿಕ ಗಾನದಲ್ಲಿ, **ಜೃಂಭಿತ ಯುಗ ಈಶ್ವರ, ಜಗದೀಶ್ವರ** – "ನೂತನ ಯುಗದ ಭಗವತ್ಸ್ವರೂಪಿ, ಜಗದೀಶ್ವರ" ಎಂದು ಬಣ್ಣಿಸುತ್ತಾರೆ. ಹಾಗೆಯೇ ತಾವು ರಚಿಸಿದ ಒಂದು ಸ್ತೋತ್ರದಲ್ಲಿ 'ಅವತಾರವರಿಷ್ಠ' – ಅವತಾರಗಳಲ್ಲಿ ಶ್ರೇಷ್ಠರಾದವರು ಎಂದೂ ಸ್ತುತಿಸುತ್ತಾರೆ. ಗಂಭೀರಾರ್ಥವುಳ್ಳ ಈ ಸ್ತೋತ್ರ ಮತ್ತು ಆರಾತ್ರಿಕ ಗಾನವನ್ನು ನೂರಾರು ಆಶ್ರಮಗಳಲ್ಲಿ ಮತ್ತು ಮನೆಗಳಲ್ಲಿ ಕೂಡ, ಜನರು ಭಕ್ತಿಯಿಂದ ಹೇಳಿಕೊಳ್ಳುತ್ತಾರೆ.

ಶ್ರೀರಾಮಕೃಷ್ಣರನ್ನು ಅವತಾರವೆಂದು ಒಪ್ಪಿಕೊಳ್ಳುವುದಕ್ಕೆ ನರೇಂದ್ರನು ಹಿಂಜರಿದಿದ್ದು ಏಕೆ? ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸಬೇಕು. ಶ್ರೀರಾಮಕೃಷ್ಣರು ಅವತಾರವೆಂಬುದು ಅವರ ಶಿಷ್ಯರು ಹುಟ್ಟುಹಾಕಿದ ಧಾರ್ಮಿಕ ನಂಬಿಕೆಯೇನಲ್ಲ. ಅವರ ಸುತ್ತಲೂ ಅವರ ಶಿಷ್ಯರು ಸೇರುವುದಕ್ಕಿಂತ ಬಹಳ ಮುಂಚೆಯೇ, ವೈಷ್ಣವಚರಣ, ನಾರಾಯಣ ಶಾಸ್ತ್ರಿ, ಇಂದೇಶದ ಗೌರಿ ಪಂಡಿತ ಮತ್ತಿತರ ಖ್ಯಾತಿವೆತ್ತ ವಿದ್ವಾಂಸರು ಶ್ರೀರಾಮಕೃಷ್ಣರು ಭಗವದವತಾರರೆಂದು ಮುಕ್ತವಾಗಿ ಘೋಷಿಸಿದ್ದರು. ನರೇಂದ್ರನಿಗೆ ಇದೆಲ್ಲವೂ ಗೊತ್ತಿತ್ತು. ಹಾಗೆಯೇ ತನ್ನ ಗುರುದೇವರ ಜೀವನದಲ್ಲಿ ನಡೆದ ಅತೀಂದ್ರಿಯ ಘಟನೆಗಳ ಅರಿವೂ ಅವನಿಗಿತ್ತು. ಒಂದು ದಿನ ಬ್ರಾಹ್ಮಸಮಾಜದ ನೇತಾರನಾದ ವಿಜಯಕೃಷ್ಣ ಗೋಸ್ವಾಮಿ ಢಾಕಾದಲ್ಲಿ ಶ್ರೀರಾಮಕೃಷ್ಣರ ದರ್ಶನವನ್ನು ಪಡೆದನು. ತಾನು ಕಾಣುತ್ತಿದ್ದ ದೇಹಾಕೃತಿಯನ್ನು ನಿಜವಾಗಿಯೂ ಅವನು ಸ್ಪರ್ಶಿಸಿದನು. ಈ ಮೂಲಕ ತಾನು ಕಾಣುತ್ತಿದ್ದುದು ಭ್ರಮೆಯಲ್ಲವೆಂದು ಅವನು ಸಾಬೀತುಪಡಿಸಿಕೊಂಡನು. ಅನಂತರ ಅವನು ಕೊಲ್ಕತಾದ ಕಾಶೀಪುರದಲ್ಲಿ ತಂಗಿದ್ದ ಶ್ರೀರಾಮಕೃಷ್ಣರ ಬಳಿಗೆ ಬಂದು, ಈ ಘಟನೆಯ ಬಗ್ಗೆ ನಿವೇದಿಸುತ್ತಾನೆ. ಆಗ ನರೇಂದ್ರನೂ ಅಲ್ಲಿದ್ದ. ಅವನು ವಿಜಯಕೃಷ್ಣ ಗೋಸ್ವಾಮಿಗೆ ಹೇಳುತ್ತಾನೆ, "ನಾನೂ ಈ ರೀತಿಯಲ್ಲಿಯೇ ಇವರನ್ನು ಹಲವಾರು ಸಲ ಕಂಡಿದ್ದೇನೆ. ಹೀಗಾಗಿ, ನಿನ್ನ ಮಾತಿನಲ್ಲಿ ವಿಶ್ವಾಸವಿಲ್ಲವೆಂದು ನಾನು ಹೇಗೆ ತಾನೇ ಹೇಳಲಿ?"

ಮೇಲಿನ ಘಟನೆಗಳಿಂದ ನಾವು ಹೀಗೆ ತರ್ಕಬದ್ಧವಾಗಿ ಊಹಿಸಿಕೊಳ್ಳಲು ಸಾಧ್ಯ: ನರೇಂದ್ರ ಅವತಾರತತ್ತ್ವದ ಗಾಢ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನು; ಅದರ ಸತ್ಯಾಸತ್ಯತೆಯ ಬಗ್ಗೆ ನಿಶ್ಚಿತಭಾವವನ್ನು ಹೊಂದಲು ಇಚ್ಛಿಸಿದ್ದನು. ಇತರ ಶಿಷ್ಯರು ತಮ್ಮ ವೈಯಕ್ತಿಕ ಮುಕ್ತಿಯ ಸಂಬಂಧವಾಗಿ ಮಾತ್ರ ಶ್ರೀರಾಮಕೃಷ್ಣರ ದಿವ್ಯತೆಯನ್ನು ಚಿಂತಿಸುತ್ತಿದ್ದರು. ಆದರೆ ನರೇಂದ್ರನಾದರೋ ಇಡೀ ಹಿಂದೂಧರ್ಮದ ಮತ್ತು ಅಖಂಡ ಮಾನವತೆಯ ಉದ್ಧಾರದ ಸಂಬಂಧದಲ್ಲಿ ಶ್ರೀರಾಮಕೃಷ್ಣರ ಅವತಾರತ್ವವು ಉಂಟುಮಾಡಬಲ್ಲ ಅದ್ಭುತ ಪರಿಣಾಮಗಳನ್ನು ಕುರಿತು ಆಲೋಚಿಸುತ್ತಿದ್ದನು.

ಹೀಗಿದ್ದಾಗ್ಯೂ, ಒಮ್ಮೆ ಈ ವಿಷಯದಲ್ಲಿ ಖಚಿತವಾದ ನಿಲುವನ್ನು ತಳೆದ ಮೇಲೆ, ನರೇಂದ್ರನು ಶ್ರೀರಾಮಕೃಷ್ಣರ ಅವತಾರತ್ವದ ಧಾರ್ಮಿಕ, ರಾಷ್ಟ್ರೀಯ ಹಾಗೂ ಜಾಗತಿಕ ಪರಿಣಾಮಗಳನ್ನು ವಿಶ್ಲೇಷಿಸಲು ತನ್ನ ಅಂತರ್ದೃಷ್ಟಿಯನ್ನು